ಓಸ್. ನಂ. 334/ 17
ಪಿಡಬ್ಲ್ಯು :1

ಸಾಕ್ಷಿಗೆ ಇಂದು ದಿನಾಂಕ 17/06/2025 ರಂದು ಪ್ರಮಾಣ ವಚನ ಬೋಧಿಸಲಾಯಿತು.

**ಪಾಟೀಸವಾಲು : ಶ್ರೀ. ಐ. ಎಸ್ ಎಮ್ ವಕೀಲರಿಂದ ಪ್ರತಿ ವಾದಿಗಳ ಪರವಾಗಿ**

1. ನಾನು ದಾವಾ ಆಸ್ತಿಯನ್ನು ಮಹದೇವ ಕಲ್ಲಪ್ಪ ಬಂಡರಕವಟೆ ಅವರಿಂದ ಖರೀದಿ ಮಾಡಿರುತ್ತೇನೆ. ನಾನು ದಾವಾ ಆಸ್ತಿ ವಿಪಿಸಿ ನಂ.146 ಆಸ್ತಿಯ ವಿಸ್ತೀರ್ಣಕ್ಕೆ ಸಂಬಂಧಿಸಿದಂತೆ ಯಾವುದೇ ದಾಖಲಾತಿಯನ್ನು ನ್ಯಾಯಾಲಯದ ಮುಂದೆ ಹಾಜರುಪಡಿಸಿರುವುದಿಲ್ಲ. ನಿಪಿ-6 ಖರೀದಿ ಪತ್ರಕ್ಕೆ ಸಂಬಂಧಿಸಿದಂತೆ ಮಹದೇವ ಕಲ್ಲಪ್ಪ ಬಂಡರಕವಟೆ ಅವರಿಗೆ ಆಸ್ತಿ ಬಂದ ಬಗ್ಗೆ ಮೂಲ ಮಾಲೀಕರಿಗೆ ಸಂಬಂಧಿಸಿದಂತೆ ಯಾವುದೇ ದಾಖಲಾತಿಗಳನ್ನು ಹಾಜರುಪಡಿಸಿರುವುದಿಲ್ಲ. ನಿಪಿ-6 ದಾವಾ ಆಸ್ತಿಗೆ ಸಂಬಂಧಿಸಿದಂತೆ ಸುತ್ತಳತೆಯನ್ನು ವಿಚಾರಿಸದೇ ನಾವು ಖೊಟ್ಟಿ ಸುತ್ತಳತೆ ಹಾಕಿಕೊಂಡು ಖರೀದಿ ಮಾಡಿರುತ್ತೇವೆ ಎಂದರೆ ಸರಿಯಲ್ಲ. ನಾವು ನಿಪಿ-6 ಖರೀದಿ ಪತ್ರವನ್ನು ಯಾವುದೇ ದಾಖಲಾತಿಗಳನ್ನು ಪರಿಶೀಲಿಸದೇ ಹೆಚ್ಚಿನ ಕ್ಷೇತ್ರ ಹಾಕಿಕೊಂಡು ಖರೀದಿ ಮಾಡಿಕೊಂಡಿರುತ್ತೇವೆ ಎಂದರೆ ಸರಿಯಲ್ಲ.
2. ಮಹದೇವ ಕಲ್ಲಪ್ಪ ಬಂಡರಕವಟೆ ಇವರಿಗೆ ತಮ್ಮ ತಂದೆಯಿಂದ ದಾವಾ ಆಸ್ತಿ ಬಂದಿರುತ್ತದೆ. ನಿಪಿ-6 ದಾವಾ ಆಸ್ತಿಗೆ ಸಂಬಂಧಿಸಿದಂತೆ 10.5 x40 =420 Sq. Ft ಸುತ್ತಳತೆ ಇದ್ದ ಬಗ್ಗೆ ಯಾವುದೇ ದಾಖಲಾತಿಗಳನ್ನು ಹಾಜರುಪಡಿಸಿರುವುದಿಲ್ಲ. ಮಹದೇವ ಇವರಿಗೆ ಆಸ್ತಿ ನಂ. 146 ರಲ್ಲಿ ದಾವಾ ಆಸ್ತಿಯ ವಿಸ್ತೀರ್ಣ 420 ಸ್ಕ್ವೇರ ಪೂಟು ಇಲ್ಲದೆ ಇರುವುದರಿಂದ ನಮಗೆ ದಾವಾ ಆಸ್ತಿಯಲ್ಲಿ ಹಕ್ಕು ಇರುವುದಿಲ್ಲ ಎಂಧರೆ ಸರಿಯಲ್ಲ.ದಾವಾ ಆಸ್ತಿ ವಿಸ್ತೀರ್ಣದ ಪ್ರಕಾರ ನಿಪಿ-6 ಖರೀದಿ ಮಾಲ್ಕಿ ಬರುವುದಿಲ್ಲ ಎಂದರೆ ಸರಿಯಲ್ಲ. ನಿಪಿ-6 ಖರೀದಿ ಪತ್ರದಲ್ಲಿ ದಾವಾ ಆಸ್ತಿಯ ಮಾಲ್ಕಿ ಬಗ್ಗೆ ಸುಳ್ಳು

ಬರೆಯಲಾಗಿರುತ್ತದೆ ಎಂದರೆ ಸರಿಯಲ್ಲ.ನಿಪಿ-6 ಖರೀದಿ ಪತ್ರದ ಪ್ರಕಾರ ನಾನು ಪಂಚಾಯತಿಯಲ್ಲಿ ದಾಖಲಿಸಿರುವುದು ಸುಳ್ಳು ಇರುತ್ತದೆ ಎಂದರೆ ಸರಿಯಲ್ಲ. ನಾನು ಖರೀದಿ ತೆಗೆದುಕೊಂಡು ದಾವಾ ಆಸ್ತಿಯ ವಿಸ್ತೀರ್ಣ 320 ಸ್ಕ್ವೆರ ಫೂಟು ಅಸ್ಟೇ ಇರುತ್ತದೆ ಎಂದರೆ ಸರಿಯಲ್ಲ. ನಾನು ನಿಪಿ-6 ರ ಪ್ರಕಾರ ಖರೀದಿ ತೆಗೆದುಕೊಂಡ ಜಮೀನಿನಲ್ಲಿ 320 ಚದರ ಸ್ಕ್ವೆರ ಫೂಟು ವಿಸ್ತೀರ್ಣದ ಜಾಗೆಯಲ್ಲಿ ಕಬ್ಜಾ ವಹಿವಾಟಿನಲ್ಲಿ ಇರುತ್ತೇನೆ ಎಂದರೆ ಸರಿ.

3. ಪ್ರತಿವಾದಿಯ ಜಾಗ ವಿಪಿಸಿ ನಂ. 147 ಇದು ನಮ್ಮ ಮನೆಯ ಪೂರ್ವ ದಿಕ್ಕಿಗೆ ಬರುತ್ತದೆ ಎಂದರೆ ಸರಿ. ಪ್ರತಿವಾದಿಯ ಆಸ್ತಿ ನಂ. 147 ಇದು 20x30 ಚದರ ಅಡಿ ವಿಸ್ತೀರ್ಣ ಇರುತ್ತದೆ ಎಂದರೆ ಸರಿ. ಪ್ರತಿವಾದಿಯ ಆಸ್ತಿ ನಂ. 147 ರ ಪೂರ್ವಕ್ಕೆ ರಸ್ತೆ ಇರುತ್ತದೆ ಎಂದರೆ ಸರಿ. ನಮ್ಮ ದಾವಾ ಆಸ್ತಿ ಪ್ರತಿವಾದಿಯ ಆಸ್ತಿಯ ಪಶ್ಚಿಮ ದಿಕ್ಕಿಗೆ ಬರುತ್ತದೆ ಎಂದರೆ ಸರಿ. ಪ್ರತಿವಾದಿಯ ಆಸ್ತಿಯ ಉತ್ತರ ದಿಕ್ಕಿಗೆ ವೀರಭದ್ರೇಶ್ವರ ದೇವಸ್ಥಾನ ಇರುತ್ತದೆ ಎಂದರೆ ಸರಿ. ದಕ್ಷಿಣ ದಿಕ್ಕಿಗೆ ನರಸಿಂಹ ಪುರೋಹಿತರವರ ಮನೆ ಇರುತ್ತದೆ ಎಂದರೆ ಸರಿ. ದಾವಾ ಆಸ್ತಿ ನಂ. 147 ಇದು 20x30 ಚದರ ಅಡಿ ವಿಸ್ತೀರ್ಣದ ಜಾಗವನ್ನು ಪ್ರತಿವಾದಿ ಮಡೆಪ್ಪಗೌಡರವರು ತಮ್ಮ ಸಂಬಂಧಿಕನಾದ ಅಣ್ಣಪ್ಪ ಸೊಡ್ಡಿಯವರಿಂದ 2005 ರಲ್ಲಿ ಗ್ರಾಮ ಪಂಚಾಯತಿ ಮೂಲಕ ಪಡೆದುಕೊಂಡಿರುತ್ತಾನೆ ಎಂದರೆ ಸರಿ. 2005 ರಲ್ಲಿ ಅಣ್ಣಪ್ಪ ಸೊಡ್ಡಿಯವರಿಂದ ಪಡೆದುಕೊಂಡ ಪ್ರತಿವಾದಿಯರ ಆಸ್ತಿ ಖಾಲಿ ಜಾಗ ಇತ್ತು ಎಂದರೆ ಸರಿ. ಪ್ರತಿವಾದಿಯು 2017 ನೇ ಇಸವಿಯಲ್ಲಿ ಗ್ರಾಮ ಪಂಚಾಯಿಂದ ಪರವಾನಿಗೆ ಪಡೆದುಕೊಂಡು ಆರ್. ಸಿ. ಸಿ. ಕಟ್ಟಡವನ್ನು ಕಟ್ಟಿರುತ್ತಾನೆ ಎಂದರೆ ಸರಿ. ಪ್ರತಿವಾದಿಯು ತನ್ನ ಆಸ್ತಿಯ ಉತ್ತರಕ್ಕೆ ಸ್ಟೇರ ಕೇಸನ್ನು ನಿರ್ಮಿಸಿರುತ್ತಾನೆ ಎಂದರೆ ಸರಿ. ಪ್ರತಿವಾದಿಯು 2017 ರಲ್ಲಿ ಗ್ರಾಮ ಪಂಚಾಯತಿಯಿಂದ ಅನುಮತಿ ಪಡೆದುಕೊಂಡು ಆರ್. ಸಿ. ಸಿ. ಕಟ್ಟಡ ಮತ್ತು ಸ್ಟೇರ

ಕೇಸನ್ನು ನಿರ್ಮಿಸಲು ಸುಮಾರು 1 ವರ್ಷ ಸಮಯಾವಕಾಶ ತೆಗೆದುಕೊಂಡಿರುತ್ತಾನೆ ಎಂದರೆ ಸರಿ. ಪ್ರತಿವಾದಿಯು ದಾವಾ ಆಸ್ತಿಯಲ್ಲಿ ಆರ್. ಸಿ. ಸಿ ಕಟ್ಟಡ ಮತ್ತು ಸ್ಟೀರ



4. ಕೇಸ ಕಟ್ಟಡ ಕಟ್ಟುವಾಗ ನಾವು ಗ್ರಾಮ ಪಂಚಾಯತಿಗೆ ತಕರಾರು ಕೊಟ್ಟಿರುವುದಿಲ್ಲ. ಪ್ರತಿವಾದಿಯು ಕಟ್ಟಡ ಕಟ್ಟಿದಾಗಿನಿಂದ ಆರ್. ಸಿ. ಸಿ ಮತ್ತು ಸ್ಟೀರ ಕೇಸನ ಸ್ವಾಧಿನ ಅನುಭೋಗದಲ್ಲಿ ಇರುತ್ತಾರೆ ಎಂದರೆ ಸರಿ.

5. ಪ್ರತಿವಾದಿಯ ಮನೆಗೆ ದಾವಾ ಆಸ್ತಿಗೆ ಹೋಗುವುದಕ್ಕೆ ಉತ್ತರಕ್ಕೆ 4 ಫೂಟು ಅಗಲ 20 ಫೂಟು ಉದ್ದ ರಸ್ತೆ ಇರುತ್ತದೆ ಎಂದರೆ ಸುಳ್ಳು. ಪ್ರತಿವಾದಿಯು ದಾವಾ ಆಸ್ತಿಗೆ ಹೋಗುವುದಕ್ಕೆ ಮತ್ತು ಬರುವುದಕ್ಕೆ ಸದರಿ ರಸ್ತೆಯನ್ನು ಉಪಯೋಗ ಮಾಡುತ್ತಾನೆ ಎಂದರೆ ಸರಿಯಲ್ಲ. ಸದರಿ ದಾರಿಯು ವಾದಿಯ ದಾವಾ ಆಸ್ತಿಯ ಪೂರ್ವ ದಿಕ್ಕಿಗೆ ಬರುತ್ತದೆ ಎಂದರೆ ಸರಿ. ಪ್ರತಿವಾದಿಯ ದಾವಾ ಆಸ್ತಿಯ ಉತ್ತರ ದಿಕ್ಕಿಗೆ ಬಾಗಿಲು ಬಿಟ್ಟಿರುತ್ತಾನೆ ಎಂದರೆ ಸರಿಯಲ್ಲ.

( ಈ ಹಂತದಲ್ಲಿ ಪ್ರತಿವಾದಿ ಪರ ವಕೀಲರು ಮುಂದುವರಿದ ಪಾಟೀಸವಾಲಿಗೆ ಸಮಯಾವಕಾಶ ಕೋರಿದ್ದು ಸಮಯಾವಕಾಶ ನೀಡಲಾಯಿತು.

(ತೆರೆದ ನ್ಯಾಯಾಲಯದಲ್ಲಿ ನನ್ನ ಹೇಳಿಕೆಯಂತೆ ಬೆರಳಚ್ಚು ಮಾಡಲಾಯಿತು)

ಓ ಹೆ ಕೆ ಸರಿ ಇದೆ

ಹೆಚ್ಚುವರಿ ದಿವಾಣಿ ನ್ಯಾಯಾಧೀಶರು

ವ ಜೆ.ಎಂ.ಎಫ್.ಸಿ., ಇಂಡಿ.